**ಬಾಹ್ಯಾಕಾಶ ಅಗಣಿತ ಅವಕಾಶಗಳ ಆಗರ. ಅಲೆದಷ್ಟೂ ದೂರಕ್ಕೆ ಕರೆದೊಯ್ಯುವ ಅಂಚಿಲ್ಲದ ಅವಕಾಶವನ್ನು ಹೊಂದಿರುವ ಮಹಾ ಬಯಲು. ಆ ಬಯಲಿನಲ್ಲೀಗ ಪ್ರವಾಸಿಗರ ಮೊದಲ ಹೆಜ್ಜೆಗಳು.**



# ಕನಸೊಂದು ಶುರುವಾಗಿದೆ...

■ **ಉಮರ ಫಾರೂಕ ಜೆ. ಮೀರಾನಾಯಕ್**

ಕೃಷಿ ಪ್ರವಾಸೋದ್ಯಮ, ಕ್ರೀಡಾ ಪ್ರವಾಸೋದ್ಯಮ, ಸಾಂಸ್ಕೃತಿಕ ಪ್ರವಾಸೋದ್ಯಮ, ಗ್ರಾಮೀಣ ಪ್ರವಾಸೋದ್ಯಮ ಸೇರಿದಂತೆ ನಾನಾ ಬಗೆಯ ಪ್ರವಾಸೋದ್ಯಮಗಳ ಬಗ್ಗೆ ಕೇಳಿದ್ದೇವೆ. 'ಬಾಹ್ಯಾಕಾಶ ಪ್ರವಾಸೋದ್ಯಮ' ಇತ್ತೀಚಿಗೆ ಅತಿ ಹೆಚ್ಚು ಮಹತ್ವವನ್ನು ಪಡೆಯುತ್ತಿರುವ ಕ್ಷೇತ್ರ. ವಿಜ್ಞಾನಿಗಳನ್ನು ಮಾತ್ರವಲ್ಲದೆ, ಖಾಸಗಿ ವ್ಯಕ್ತಿಗಳನ್ನೂ ಭೂಮಿಯಿಂದಾಚೆಗೆ, ರಾಕೆಟ್‌ಗಳ ಮೂಲಕ ಕರೆದುಕೊಂಡು ಹೋಗುವ ಹೊಸದೊಂದು ಉದ್ಯಮವೇ 'ಬಾಹ್ಯಾಕಾಶ ಪ್ರವಾಸೋದ್ಯಮ'.

2001ರಲ್ಲಿ 'ಸ್ಪೇಸ್ ಅಡ್ವೆಂಚರ್' ಹಾಗೂ ರಷ್ಯಾದ ಖಾಸಗಿ ಕಂಪನಿಯ ಸಹಭಾಗಿತ್ವದಲ್ಲಿ ಯೋಜಿಸಲಾದ ಉಡಾವಣೆಯೊಂದರಲ್ಲಿ, ಅಮೆರಿಕದ ಶ್ರೀಮಂತ ಉದ್ಯಮಿ ಡೆನ್ನಿಸ್ ಟಿಟೋ 20 ದಶಲಕ್ಷ ಮಿಲಿಯನ್ ಡಾಲರ್ ಕೊಟ್ಟು ಟಿಕೆಟ್ ಖರೀದಿಸಿ ಬಾಹ್ಯಾಕಾಶಕ್ಕೆ ಹೋಗಿ ಬಂದಿದ್ದರು. ಆ ಮೂಲಕ, ಡೆನ್ನಿಸ್ ಟಿಟೋ ವಿಶ್ವದ ಮೊದಲ ಬಾಹ್ಯಾಕಾಶ ಯಾತ್ರಿಕ ಅಥವಾ ಬಾಹ್ಯಾಕಾಶ ಪ್ರವಾಸಿಗ ಎನ್ನುವ ಹೆಗ್ಗಳಿಕೆಗೆ ಪಾತ್ರರಾದರು. ಆದರೆ, ಟಿಟೋ ತಮ್ಮನ್ನು ಬಾಹ್ಯಾಕಾಶ ಪ್ರವಾಸಿಗನೆಂದು ಕರೆಯುವುದನ್ನು ವಿರೋಧಿಸಿದ್ದರು. 2006ರಲ್ಲಿ ಬಾಹ್ಯಾಕಾಶ ಯಾತ್ರೆಗೆ ಹೋದ ಇರಾನ್ ಮೂಲದ ಅನೌಶಿ ಅನ್ಸಾರಿ ಎಂಬುವವರು ವಿಶ್ವದ ಮೊದಲ ಮಹಿಳಾ ಬಾಹ್ಯಾಕಾಶ ಯಾತ್ರಿ.

## ಬಾಹ್ಯಾಕಾಶದಲ್ಲಿ ಪ್ರವಾಸಿ ತಾಣಗಳು

ಖಾಸಗಿ ಅಥವಾ ಸರ್ಕಾರಿ ಸಂಸ್ಥೆಗಳ ಉಡ್ಡಯನ ವಾಹಕಗಳ ಮೂಲಕ ಬಾಹ್ಯಾಕಾಶಕ್ಕೆ ಯಾತ್ರೆ ಮಾಡಲು ಬಯಸುವವರಿಗೆ, ಪ್ರಸ್ತುತ ಮೂರು ಬಗೆಯ ಪ್ರವಾಸಿ ತಾಣಗಳನ್ನು ಅಂತರಿಕ್ಷದಲ್ಲಿ ಗುರುತಿಸಲಾಗಿದೆ. ಅವುಗಳೆಂದರೆ:

1. ಭೂ ಕಕ್ಷೆಯ ಸುತ್ತಲಿನ ತಾಣ
2. ಉಪ ಕಕ್ಷೆಯ ಸುತ್ತಲಿನ ತಾಣ
3. ಭೂಮ್ಯಾತೀತ ಆಕಾಶಕಾಯಗಳ ತಾಣ

## ಭೂ ಕಕ್ಷೆಯ ಸುತ್ತಲಿನ ತಾಣ

ಪ್ರವಾಸ ಎಂದಾಕ್ಷಣ ನಾವು ಭೇಟಿ ನೀಡಬೇಕಾದ ಸ್ಥಳಗಳ ಪಟ್ಟಿಯನ್ನು ಹಾಗೂ ಆ ಸ್ಥಳ ನಮ್ಮಿಂದಿರುವ ದೂರವನ್ನು, ಹಾಗೆಯೇ ವಾಹನದ ಬಾಡಿಗೆಗೆ ಬೇಕಾದ ಹಣವನ್ನು ಹೊಂದಿಸುವ ಕುರಿತು ಲೆಕ್ಕಾಚಾರ ಶುರುವಾಗುತ್ತದೆ. ಬಾಹ್ಯಾಕಾಶ ಯಾತ್ರೆ ಕೈಗೊಳ್ಳಬೇಕಾದರೂ ಕೂಡ ಅದರದ್ದೇ ಆದ ಲೆಕ್ಕಾಚಾರಗಳಿವೆ. ಇಲ್ಲಿ ನಾವು ಹಾರಿ ಹೋಗಲು ಬೇಕಾದ ವಾಹನದ ಕ್ಷಮತೆ ಪ್ರಮುಖವಾಗಿ ಪರಿಗಣಿಸಬೇಕಾಗುತ್ತದೆ. ಅದರ ಆಧಾರದ ಮೇಲೆ ನಾವು ಮೇಲೆ ತಿಳಿಸಿದ ತಾಣಗಳಲ್ಲಿ ಯಾವುದಕ್ಕೆ ಹೋಗಲು ಸಾಧ್ಯ ಎಂಬುದನ್ನು ನಿರ್ಧರಿಸಬಹುದಾಗಿದೆ. ಸಾಮಾನ್ಯವಾಗಿ ಉಡ್ಡಯನ ನೌಕೆಯ ವೇಗ ಎಷ್ಟಿದೆ ಎಂಬುದರ ಮೇಲೆ ಪ್ರವಾಸದ ಪಟ್ಟಿ ತಯಾರಿಸಿಕೊಳ್ಳಬಹುದು.

ಭೂ ಕಕ್ಷೆಯ ಸುತ್ತಲಿನ ತಾಣಗಳನ್ನು ವೀಕ್ಷಿಸಬೇಕಾದರೆ, ನಮ್ಮ ಉಡ್ಡಯನ ನೌಕೆಯ ವೇಗ 'ಕಕ್ಷಾ ವೇಗ'ವನ್ನು ಹೊಂದಿರಬೇಕಾಗುತ್ತದೆ. ಭೂ ಕಕ್ಷಾ ಪರ್ಯಟನೆಗೆಂದು ಮೀಸಲಿರಿಸಿದ ನೌಕೆಗಳು ಭೂಮಿಯಿಂದ ಸುಮಾರು 125 ಮೈಲುಗಳಷ್ಟು ದೂರ (200 ಕಿ.ಮೀ.) ದೂರವನ್ನು ಪ್ರತಿ ಗಂಟೆಗೆ 28 ಸಾವಿರ ಕಿ.ಮೀ. ವೇಗದಲ್ಲಿ ಚಿಮ್ಮಬೇಕಾಗುತ್ತದೆ. ಇದನ್ನು ಸುಲಭವಾಗಿ ತಿಳಿಯಬೇಕೆಂದರೆ, ಒಂದು ದಾರಕ್ಕೆ ಕಟ್ಟಿದ ಕಲ್ಲನ್ನು ವೃತ್ತಾಕಾರದಲ್ಲಿ ಬೀಸಿದಾಗ, ಅದಕ್ಕೆ ಒಂದೇ ಸಮನಾದ ವೇಗವನ್ನು ನೀಡಿದರೆ ಅದು ನಿರ್ದಿಷ್ಟ ಪಥದಲ್ಲಿಯೇ ನಿರಂತರವಾಗಿ ಸುತ್ತುತ್ತಲಿರುತ್ತದೆ. ಅದೇ ನಾವು ವೇಗವನ್ನು ಕಡಿಮೆ ಮಾಡಿದರೆ ಕಲ್ಲು ತನ್ನ ಪಥವನ್ನು